(ಸದನವು ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಪ್ರಾರಂಭಗೊಂಡಿತು)

ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದರು.

**ಶ್ರೀ ಜಗದೀಶ್ ಶೆಟ್ಟರ್:** ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ ಮಹತ್ವವಾದ ವಿಚಾರ ಏನೆಂದರೆ, ಆಂಧ್ರಪ್ರದೇಶ...

**ಅಧ್ಯಕ್ಷರು:** ಒಂದು ಪ್ರಕಟಣೆ ಇದೆ. ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡುವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 30.03.05ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿದೆ.

1. ಕರ್ನಾಟಕ ಧನ ವಿನಿಯೋಗ (ಲೇಖಾನುಧಾನ) ವಿಧೇಯಕ 2005
2. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2005
3. ಕರ್ನಾಟಕ ಅಭ್ಕಾರಿ (ತಿದ್ದುಪಡಿ) ವಿಧೇಯಕ, 2005
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ ವಿಧೇಯಕ, 2005)

**ಶ್ರೀ ಜಗದೀಶ್ ಶೆಟ್ಟರ್:**– ಸನ್ಮಾನ್ಯ ಅಧ್ಯಕ್ಷರೆ, ಆಂಧ್ರಪ್ರದೇಶ ...

ಅಧ್ಯಕ್ಷರು:– Adjournment motion ಮೂಲಕ ತಾವು ಪ್ರಸ್ತಾಪಿಸಬೇಕೆಂದಿರುವ ವಿಷಯವನ್ನು ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:**– ಇದು ಬಹಳ ಮಹತ್ವದ ವಿಷಯ. ಈಗಾಗಲೇ 21 ಕಾಮಗಾರಿಗಳಿಗೆ 4 ಸಾವಿರ ಕೋಟಿ ರೂಪಾಯಿಗಳಷ್ಟು ವೆಚ್ಚದ ಯೋಜನೆಗಳಿಗೆ ಈಗಾಗಲೇ ಇವತ್ತು ಅನುಮತಿ ಕೊಟ್ಟು clearance ಕೊಟ್ಟು, ಈಗಾಗಲೇ ಹಲವಾರು ಯೋಜನೆಗಳ ಕೆಲಸ ಆಂಧ್ರದಲ್ಲಿ ಪ್ರಾರಂಭವಾಗಿದೆ. ಕೃಷ್ಣಾ ನದಿ ಕಣಿವೆ ಬಗ್ಗೆ ಈಗಾಗಲೇ ಸಾಕಷ್ಟು ಇಲ್ಲಿ ಚರ್ಚೆಯಾಗಿದೆ. ಇದಲ್ಲದೆ ಹೊಸದಾಗಿ ಒಂದು tribunal constitute ಆಗಿದೆ. ಇವತ್ತು 'ಎ' ಸ್ಕೀಮ್ ಪ್ರಕಾರ ಏನು ನೀರನ್ನು utilisation ಮಾಡಬೇಕಾಗಿತ್ತೋ, ನಮ್ಮ ರಾಜ್ಯ ಸರ್ಕಾರ utilisation

ಮಾಡಲಿಲ್ಲ, ಆದರೆ ಇವತ್ತು ಆಂಧ್ರಪ್ರದೇಶ ತನ್ನ ಪಾಲಿಗೆ ಬರತಕ್ಕಂಥ 811 ಟಿ.ಎಂ.ಸಿ. ಈಗಾಗಲೇ 'ಎ' ಸ್ಕೀಮ್ ಪ್ರಕಾರ ಇರುವಂತಾದ್ದನ್ನೇ, ಅದು utilisation ಮಾಡಿದೆ. ಈಗ ಅದು ಹೆಚ್ಚಿನ ನೀರನ್ನು utilisation ಮಾಡಲಿಕ್ಕೆ ಎಲ್ಲಾ ರೀತಿಯ ಕುತಂತ್ರವನ್ನು ಆಂಧ್ರಪ್ರದೇಶ ಮಾಡಲಿಕ್ಕೆ ಹೊರಟ್ಟಿದ್ದಾರೆ. ಇದು ಇವತ್ತು ರಾಜ್ಯ ಸರ್ಕಾರದ ಗಮನಕ್ಕೆ ಏಕೆ ಬರುತ್ತಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ. ಈ ರೀತಿ ಹಲವಾರು ವರ್ಷಗಳಿಂದ ಇವತ್ತು ಆಂಧ್ರಪ್ರದೇಶ ಒಂದಿಲ್ಲೊಂದು ರೀತಿಯಿಂದ ಯೋಜನೆಗಳನ್ನು ಇವತ್ತು ಕೃಷ್ಣಾ ಕಣಿವೆ ಯೋಜನೆಗೆ ಸಂಬಂಧಪಟ್ಟಂತೆ, ಅದು ಅನಧಿಕೃತವಾಗಿ ಇವತ್ತು ಕೆಲಸವನ್ನು ಪ್ರಾರಂಭ ಮಾಡುವಂತಾದ್ದು ಮತ್ತು ತ್ವರಿತ ಗತಿಯಿಂದ ಮುಗಿಸುವಂತಾದ್ದು ಮತ್ತು ಬಚಾವತ್ ಅವಾರ್ಡ್ ಪ್ರಕಾರ ಏನೊಂದು ನೀರಿನ ಶೇರನ್ನು ಅದು ತೆಗೆದುಕೊಳ್ಳಬೇಕಾಗಿತ್ತೋ, ಅದಕ್ಕಿಂತ ಹೆಚ್ಚು ನೀರನ್ನು utilise ಮಾಡುವಂತಹ ಹುನ್ನಾರವನ್ನು ಆಂಧ್ರ ಪ್ರದೇಶ ಇವತ್ತು ಮಾಡುತ್ತಿದೆ. ಬಚಾವತ್ ಅವಾರ್ಡ್ ಪ್ರಕಾರ ಇವತ್ತು 'ಎ' ಸ್ಕೀಮ್ ಪ್ರಕಾರ, 734 ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಆದರೆ ಇವತ್ತು ರಾಜ್ಯ ಸರ್ಕಾರವೇ ಹಲವಾರು ಕಡೆ ಹೇಳಿದ ಪ್ರಕಾರ, ಕೇವಲ 550 ಟಿ.ಎಂ.ಸಿಗಳಷ್ಟು ನೀರನ್ನು ಮಾತ್ರ ಇವತ್ತು ಉಪಯೋಗ ಮಾಡುತ್ತಿದೆ. ಇನ್ನು ಉಳಿದಿದ್ದನ್ನು ಉಪಯೋಗ ಮಾಡಲಿಕ್ಕೆ ಆಗುತ್ತಿಲ್ಲ. ಏಕೆಂದರೆ 'ಎ' ಸ್ಕೀಮ್ ಪ್ರಕಾರ ಇರುವ ಕಾಮಗಾರಿಗಳನ್ನು ಇವತ್ತು ನಮ್ಮ ರಾಜ್ಯ ಸರ್ಕಾರ ....

**ಶ್ರೀ ಪಿ.ಜಿ.ಆರ್.ಸಿಂಧ್ಯಾ:–** ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಎತ್ತಿರುವಂತಹ ವಿಚಾರದ ಮಹತ್ವವನ್ನು ನಾನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಪ್ರಶ್ನೋತ್ತರ ಇದೆ. ಇದು ಚರ್ಚೆಯಾಗಲಿ, ಕರ್ನಾಟಕ ರಾಜ್ಯ ಸರ್ಕಾರ ಯಾವುದೇ ಕಾರಣದಿಂದ ರಾಜ್ಯದ ಪಾಲಿಗೆ ಬರತಕ್ಕಂಥ ನೀರಿನ ವಿಚಾರವಾಗಿ ಯಾವುದೇ ರೀತಿಯ compromise ಮಾಡಿಕೊಳ್ಳುವುದಿಲ್ಲ ಎನ್ನುವುದನ್ನು ಹೇಳಬಯಸುತ್ತೇನೆ, ನಾವು ಈ ವಿಚಾರದಲ್ಲಿ ಸ್ಪಷ್ಟವಾಗಿದ್ದೇವೆ. ಯಾವ ಆಧಾರದ ಮೇಲೆ ಇವರು ಹೇಳುತ್ತಿದ್ದಾರೆ? ಏನೇನು ಅನ್ನತಕ್ಕಂಥದ್ದು.....

**(ಗೊಂದಲ)**

**ಶ್ರೀ ಕೆ.ನಿಜೇಶ್ವರ ಹೆಗಡೆ:–** ಮಾನ್ಯ ಅಧ್ಯಕ್ಷರೆ, ಅವರು ಹೇಳುವುದನ್ನು ಹೇಳಿ ಮುಗಿಸಲಿ. ಈಗಾಗಲೇ ಕರ್ನಾಟಕದ ಹಿತವನ್ನು ಬಲಿ ಕೊಟ್ಟು ಆಗಿದೆ....

(ಗೊಂದಲ)

**ಅಧ್ಯಕ್ಷರು:**– ಮಾನ್ಯ ಸಚಿವರು ಸರ್ಕಾರದ ಪರವಾಗಿ ಏನೋ ಹೇಳುತ್ತಿದ್ದಾರೆ. ಕೇಳಿ.

(ಗೊಂದಲ)

**ಶ್ರೀ ಪಿ.ಜಿ.ಆರ್.ಸಿಂಧ್ಯಾ:**– ...ಸರ್ಕಾರದ ನಿಲುವೇನು ಎಂಬುದನ್ನು ನಾವು ತಿಳಿಸಬೇಕಾಗುತ್ತದೆ.

(ಗೊಂದಲ)

**ಅಧ್ಯಕ್ಷರು :** He raised some objections.

(ಗೊಂದಲ)

**ಅಧ್ಯಕ್ಷರು:**– ..... ಮಾನ್ಯ ಜಗದೀಶ್ ಶೆಟ್ಟರ್‌ರವರೇ, ತಾವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೇನೋ ಸರ್ಕಾರದ ಪರವಾಗಿ ಹೇಳುತ್ತಿದ್ದಾರೆ. ಅದನ್ನು ಕೇಳೋಣ. ಸ್ವಲ್ಪ ತಡೆಯಿರಿ, ಅವರೇನು ಹೇಳುತ್ತಾರೋ ಕೇಳಿ. ಮಾನ್ಯ ಸಚಿವರೆ ಹೇಳಿ.

**ಶ್ರೀ ಪಿ.ಜಿ.ಆರ್.ಸಿಂಧ್ಯಾ:** ಮಾನ್ಯ ಜಗದೀಶ್ ಶೆಟ್ಟರ್‌ರವರು ಒಬ್ಬ ಅನುಭವಸ್ಥ ಶಾಸಕರಿದ್ದಾರೆ. ಅವರು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದರು. ಒಂದು ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರು ಸಾಕ್ಷಿ ಆಧಾರಗಳಿಲ್ಲದೆ ಮಾತನಾಡುವುದಿಲ್ಲ ಅನ್ನತಕ್ಕಂಥದ್ದು ನನಗೆ ಮನವರಿಕೆಯಾಗಿದೆ. ಕೊನೆಯ ಪಕ್ಷ ಪತ್ರಿಕಾ ಹೇಳಿಕೆಯನ್ನಾದರೂ ಅವರು ಸಾಕ್ಷಿ ಆಧಾರವಾಗಿ ಇಟ್ಟುಕೊಂಡಿರುತ್ತಾರೆ ಅಥವಾ ಅವರು ಬೇರೆ ರೀತಿಯಿಂದ ಆಂಧ್ರಪ್ರದೇಶದಿಂದ ಅಥವಾ ಕೇಂದ್ರದಿಂದ ಮಾಹಿತಿಗಳನ್ನು ತರಿಸಿಕೊಂಡಿರಬಹುದು. ರಾಜ್ಯದ ಹಿತದೃಷ್ಟಿಯಿಂದಾಗಿ ನಾವು ಇದನ್ನೆಲ್ಲಾ ನೋಡಬೇಕಾಗುತ್ತದೆ. ಆದ್ದರಿಂದ, ಅವರೇನು ಹೇಳುತ್ತಾರೋ, ಅದನ್ನು ಸರ್ಕಾರದವರಾದ ನಾವೆಲ್ಲಾ ಕೇಳುತ್ತೇವೆ. ಸರ್ಕಾರ ಕೇಳಿ, ಅದರ ಸತ್ಯಾಸತ್ಯತೆಗಳನ್ನು ಪರಿಶೀಲಿಸಿ ಉತ್ತರ ಕೊಡುತ್ತದೆ. ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಬಿ.ಜೆ.ಪಿ., ಕಾಂಗ್ರೆಸ್, ಜೆ.ಡಿ.(ಎಸ್) ಮತ್ತೊಂದು ಅನ್ನತಕ್ಕಂಥದ್ದು ಬರುವುದಿಲ್ಲ. ನಾವೆಲ್ಲರೂ ಸೇರಿ ಹೋರಾಟವನ್ನು ಮಾಡಬೇಕಾಗುತ್ತದೆ ಎನ್ನುವುದು ಸರ್ಕಾರದ ಸ್ಪಷ್ಟವಾದಂತಹ ವಿಚಾರವಾಗಿದೆ. ಈ ವಿಚಾರದಲ್ಲಿ ಅಂದರೆ ನೆಲದ ವಿಚಾರದಲ್ಲಿ. ಜಲದ ವಿಚಾರದಲ್ಲಿ ಭಾಷೆ

ವಿಚಾರದಲ್ಲಿ ಈ ಸಭೆಯಲ್ಲಿ ಬೇಕಾದಷ್ಟು ಸಾರಿ ನಾವು ಚರ್ಚೆ ಮಾಡಿದ್ದೇವೆ. ನಾವೆಲ್ಲಾ ಪಕ್ಷದವರು ಒಟ್ಟಿಗೆ ಹೋಗುತ್ತೇವೆ. ಆದ್ದರಿಂದ...

**(ಗೊಂದಲ)**

**ಅಧ್ಯಕ್ಷರು:**– ದಯಮಾಡಿ ನನ್ನ ಮಾತು ಕೇಳಿ.

**(ಗೊಂದಲ)**

**ಶ್ರೀ ಕೆ.ವಿಶ್ವೇಶ್ವರ ಹೆಗಡೆ:**– ಈ ಮಾತನ್ನು ಹೇಳುತ್ತಾ ಹೇಳುತ್ತಲೆ ರಾಜ್ಯದ ಹಿತವನ್ನು ಬಲಿಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ರಾಜ್ಯದ ಹಿತವನ್ನು ಬಲಿಕೊಡುವುದರಲ್ಲಿ ಮುಂದೆ ಇದ್ದೇವೆ...

**(ಗೊಂದಲ)**

**ಅಧ್ಯಕ್ಷರು:**– ಏಕೆ ಹೀಗೆ ಮಾಡುತ್ತೀರಿ? ದಯವಿಟ್ಟು ನಾನು ಹೇಳುವುದನ್ನು ಕೇಳಿ. ನಾನು ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯಾದ ಮೇಲೆ ಈ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತೇನೆ.

**(ಗೊಂದಲ)**

**ಅಧ್ಯಕ್ಷರು:**– ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದ ಮೇಲೆ ನಿಮ್ಮದೇನು? ಆಗ ಏನಿದ್ದರೂ ಮಾತನಾಡಿ.

**(ಗೊಂದಲ)**

**ಅಧ್ಯಕ್ಷರು:**– ಮಾನ್ಯ ಕಾರಜೋಳರವರೆ, ಇದು ಬಹಳ ಗಂಭೀರವಾದ ಪ್ರಶ್ನೆ. ರಾಜ್ಯದ ಹಿತಕ್ಕೆ ಸಂಬಂಧಪಟ್ಟ ಪ್ರಶ್ನೆ. ಆದ್ದರಿಂದ ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯಾದ ಮೇಲೆ ಇದರ ಮೇಲಿನ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ.

**(ಗೊಂದಲ)**

**ಶ್ರೀ ವಿಶ್ವೇಶ್ವರ ಹೆಗಡೆ:**– ರಾಜ್ಯದ ಹಿತ ಸಂಪೂರ್ಣವಾಗಿ.....

**ಅಧ್ಯಕ್ಷರು:**– ಆಯಿತು. ಏನು ಬೇಕೋ ಅದನ್ನು ನಾನು ಚರ್ಚೆಗೆ ಅವಕಾಶ ಕೊಟ್ಟಾಗ ಮಾತನಾಡಿ. ದಯಾಮಾಡಿ ಸಹಕರಿಸಿ.

**(ಗೊಂದಲ)**

**ಅಧ್ಯಕ್ಷರು:–** ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ ಮೇಲೂ, ನೀವ್ಯಾಕೆ ಹೀಗೆ ಮಾಡುತ್ತೀರಿ?

ಶ್ರೀ ಗೋವಿಂದ ಎಂ.ಕಾರಜೋಳ:– ನಂತರ ಪ್ರಶ್ನೋತ್ತರ ತೆಗೆದುಕೊಳ್ಳಿ. ಮೊದಲು ಇದನ್ನು ಚರ್ಚೆಗೆ ತೆಗೆದುಕೊಳ್ಳಿ

**ಅಧ್ಯಕ್ಷರು:–** ನೋ. ಮೊದಲು ಪ್ರಶ್ನೋತ್ತರ ನಡೆಯಲಿ.

**(ಗೊಂದಲ)**

**ಅಧ್ಯಕ್ಷರು:–** ನಾನು ನಿಮ್ಮದನ್ನು ಕೇಳಿದ್ದೇನೆ. ಅವರದನ್ನೂ ಕೇಳಿದ್ದೇನೆ. ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಅಧ್ಯಕ್ಷರು:–** ಈಗ ಪ್ರಶ್ನೋತ್ತರ, ಮಾನ್ಯ ಬಾಲರಾಜ್‌ರವರು ತಮ್ಮ ಪ್ರಶ್ನೆ ಕೇಳಿ. ದಯಮಾಡಿ ಸಹಕರಿಸಿ ಜವಾಬ್ದಾರಿಯಿಂದ ನಡೆದುಕೊಳ್ಳಿ

**(ಗೊಂದಲ)**

**ಶ್ರೀ ಕೆ.ವಿಶ್ವೇಶ್ವರ ಹೆಗಡೆ:–** ... ಸರ್ಕಾರವೇ ಪಶ್ನೋತರವನು. ಮುಂದೂಡಿ. ಇಂತಹ ಮಹತ್ವದ ವಿಷಯ. ರಾ[illegible] ನಾವು ಪ್ರಶ್ನೋತ್ತರವನ್ನು ಆಮೇಲೆ [illegible] ಸರ್ಕಾರವೇ ಹೇಳಬೇಕು. ಅದು ತನ್ನ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕು....

**(ಗೊಂದಲ)**

**ಅಧ್ಯಕ್ಷರು:–** ಆಯಿತು ಬಿಡಿ ನಾನು ಈಗಾಗಲೇ ಮಾನ್ಯ ಬಾಲರಾಜ್‌ರವರನ್ನು ಪ್ರಶ್ನೆ ಕೇಳಲು ಕರೆದಿದ್ದೇನೆ.

**(ಗೊಂದಲ)**

**ಶ್ರೀ ವಾಟಾಳ್ ನಾಗರಾಜ್:–** ಮಾನ್ಯ [illegible] ಬಹಳ ಪ್ರಾಮುಖ್ಯವಾದ ವಿಚಾ[illegible] ಪ್ರಶ್ನೆಯಾಗಿದೆ....

**ಅಧ್ಯಕ್ಷರು:–** ಮಾನ್ಯ ವಾಟಾಳ್ ನಾಗರಾಜ್‌ರವರೆ, [illegible]

ಮಾಡಿಯೇ ಆ ವಿಚಾರ ಪ್ರಸ್ತಾಪಿಸಲು ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯಾದ ನಂತರ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಇದೇನು ಆಗುತ್ತಿದೆ ಎಂದರೆ, ಸಮಯ ಹಾಳು ಮಾಡುವುದಕ್ಕೆ ಏನು ಬೇಕೋ ಅದನ್ನು ಮಾಡುತ್ತಿದ್ದೀರಿ. ಇನ್ನೂ ಪ್ರಸ್ತಾಪಿಸಬೇಕಾದ ಅನೇಕ ವಿಚಾರಗಳಿವೆ. ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ. ನಾನು ಇದಕ್ಕಾಗಿ ಸಮಯ ಕೊಡುತ್ತೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದು ಬಹಳ ಗಂಭೀರವಾಗಿ ಚರ್ಚೆಯಾಗಬೇಕು. ಸರ್ಕಾರದವರು ತಮ್ಮ ನಿಲುವನ್ನು ಹೇಳಿದ್ದಾರೆ. ಅಷ್ಟರೊಳಗಾಗಿ ಅವರಿಗೆ ಏನೇನು ಮಾಹಿತಿ ಬೇಕೋ ಅದನ್ನು ಅವರು ಸಂಗ್ರಹಿಸಿಕೊಳ್ಳುತ್ತಾರೆ. ಇನ್ನೊಂದು ಗಂಟೆಯೊಳಗಾಗಿ ಪ್ರಶ್ನೋತ್ತರವನ್ನು ಮುಗಿಸೋಣ ಶೂನ್ಯ ವೇಳೆಯಲ್ಲಿ ಕೆಲವು ವಿಚಾರಗಳು ಪ್ರಸ್ತಾಪವಾಗುತ್ತವೆ. ಅದಾದ ಮೇಲೆ ಇದರ ಮೇಲೆ ವಿವರವಾದ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಸಹಕರಿಸಿ

(ಗೊಂದಲ)

**ಶ್ರೀ ವಾಟಾಳ್ ನಾಗರಾಜ್**:– ಇದರ ಮಹತ್ವವನ್ನು ಅರಿತು ದಯವಿಟ್ಟು ಪ್ರಶ್ನೋತ್ತರವನ್ನು ಮುಂದೂಡಿ.

**ಶ್ರೀ ಗೋವಿಂದ ಎಂ.ಕಾರಜೋಳ**:– ..... 4408 ಕೋಟಿ ರೂಪಾಯಿಗಳಿಗೆ ಅಗ್ರಿಮೆಂಟ್ ಆಗಿದೆ ಕೆಲಸ ಪ್ರಾರಂಭವಾಗಿ ಆರು ತಿಂಗಳಾಗಿದೆ.....

**ಅಧ್ಯಕ್ಷರು**:– ಆಯಿತು. ಅದನ್ನೆಲ್ಲಾ ವಿವರವಾಗಿ ಚರ್ಚೆ ಮಾಡೋಣ. ಮೊದಲು ಪ್ರಶ್ನೋತ್ತರ ಆಗಲಿ.

(ಗೊಂದಲ)

**ಅಧ್ಯಕ್ಷರು**:– ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಬಾಲರಾಜ್‌ರವರೆ, ತಮ್ಮ ಪ್ರಶ್ನೆ ಕೇಳಿ.

(ಗೊಂದಲ)

**ಶ್ರೀ ವಾಟಾಳ್ ನಾಗರಾಜ್**:– ಮಾನ್ಯ ಅಧ್ಯಕ್ಷರೇ, ನಾನು ಏಕೆ ತಮ್ಮಲ್ಲಿ ಮನವರಿಕೆ ಮಾಡುತ್ತಿದ್ದೇನೆ ಎಂದರೆ.....

**ಅಧ್ಯಕ್ಷರು**:– ನೀವು ಎದ್ದು ನಿಂತುಕೊಳ್ಳುವಂತೆಯೇ ಇಲ್ಲ. you are not at all a signatory ಆದ್ದರಿಂದ ದಯಮಾಡಿ ಸಹಕರಿಸಿ. ನಂತರ ನೀವು ವಿವರವಾಗಿ

ಏನು ಮಾತನಾಡಬೇಕೋ ಅದನ್ನು ಮಾತನಾಡಿ, ಅವಕಾಶ ಮಾಡಿಕೊಡುತ್ತೇನೆ. ಈಗ ದಯಮಾಡಿ ಸಹಕರಿಸಿ. ಮೊದಲು ಪ್ರಶ್ನೋತ್ತರ ಮುಗಿಸಿಬಿಡೋಣ.

**(ಗೊಂದಲ)**

**ಅಧ್ಯಕ್ಷರು:–** ಆಯಿತು. ಪ್ರಶ್ನೋತ್ತರ ಆದ ಮೇಲೆಯೇ ಇದನ್ನು ತೆಗೆದು ಕೊಳ್ಳೋಣ ಬಿಡಿ. ಅದರ ನಂತರವೇ ಶೂನ್ಯ ವೇಳೆ ತೆಗೆದುಕೊಂಡರಾಯಿತು. ಈಗ ಮಾನ್ಯ ಬಾಲರಾಜ್‌ರವರೆ, ತಮ್ಮ ಪ್ರಶ್ನೆ ಕೇಳಿ.

| | | |
|---|---|---|
| 1. | ಚುಕ್ಕ ಗುರುತಿನ ಪ್ರಶ್ನೆ ಸಂಖ್ಯೆ: | 3756 |
| 2. | ಸದಸ್ಯರ ಹೆಸರು: | ಶ್ರೀ ಬಾಲರಾಜ್.ಎಸ್. – ಕೊಳ್ಳೇಗಾಲ |
| 3. | ವಿಷಯ: | ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಅನ್ಯಾಯ. |
| 4. | ಉತ್ತರಿಸುವವರು: | ರೇಷ್ಮೆ ಸಚಿವರು ಶ್ರೀ ಕೆ.ಚೆನ್ನಿಗಪ್ಪ |
| | **ಪ್ರಶ್ನೆಗಳು** | **ಉತ್ತರಗಳು** |
| ಅ. | ಮುಡಿಗುಂಡಂ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೈತರಿಗೆ ಹಾಗೂ ನಿಜವಾದ ರೀಲರ್‌ಗಳಿಗೆ ಅನ್ಯಾಯ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಮುಡಿಗುಂಡಂ ರೇಷ್ಮೆ, ಗೂಡಿನ ಮಾರುಕಟ್ಟೆಯಲ್ಲಿ ರೈತರಿಗೆ ಹಾಗೂ ನಿಜವಾದ ರೀಲರುಗಳಿಗೆ ಯಾವುದೇ ಅನ್ಯಾಯವಾಗಿರುವುದಿಲ್ಲ. ಆದಾಗ್ಯೂ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಈ ಮಾರುಕಟ್ಟೆಯಲ್ಲಿ ಒದಗಿಸಲಾಗಿದೆ. |
| ಆ. | ಬಂದಿದ್ದರೆ, ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು: | 1. ಕೇವಲ ರಹದಾರಿ/ ಗುರುತಿನ ಚೀಟಿ ಉಳ್ಳಂತಹ ವ್ಯಕ್ತಿಗಳು ಮರುಕಟ್ಟೆಯ |